**ನಿರ್ದೇಶಿಸುತ್ತಿದ್ದೀರಲ್ಲ? ಇದಕ್ಕೆ ಏನು ಕಾರಣ?**

ಒಂದೊಂದು ಹಂತದಲ್ಲಿ ಒಂದೊಂದು ಬಗೆಯ ಅವಕಾಶಗಳು ಬರುತ್ತಿವೆ. ನನ್ನ ಒಲವುಗಳೂ ಬದಲಾಗುತ್ತಿವೆ. ಮೊದಲು ಪ್ರೇಮ, ಭಗ್ನಪ್ರೇಮದ ಕಥೆಗಳನ್ನು ಮಾಡುತ್ತಿದ್ದೆ. ನಂತರ 'ಉಲ್ಟಾ ಪಲ್ಟಾ', 'ರಾಮ ಶ್ಯಾಮ ಭಾಮ' ಸಿನಿಮಾಗಳಿಂದ ಕಾಮಿಡಿ ಶುರುವಾಯ್ತು. ಈಗ ಡ್ರಾಮಾ, ಹೈ ಇಂಟೆನ್ಸ್ ಸಿನಿಮಾಗಳನ್ನು ಮಾಡುವ ಅವಕಾಶ ಬರುತ್ತಿವೆ. ನನ್ನ ವಯಸ್ಸಿಗೂ ಈ ಪೊಲೀಸ್ ಅಧಿಕಾರಿ, ಪತ್ತೆದಾರಿ ಪಾತ್ರಗಳು ಮ್ಯಾಚ್ ಆಗುತ್ತಿವೆ. ಆದ್ರೆ ಈಗ ಎಲ್ಲರೂ 'ರಾಮ ಶ್ಯಾಮ ಭಾಮ' ಥರದ ಒಂದು ಕಾಮಿಡಿ ಸಿನಿಮಾ ಮಾಡಿ ಎಂದು ಕೇಳ್ತಿದ್ದಾರೆ. ನೋಡೋಣ ಏನಾಗತ್ತೆ ಅಂತ.

◆ **'ವೀಕೆಂಡ್ ವಿತ್ ರಮೇಶ್'ಗೆ ಸ್ಪಂದನ ಹೇಗಿದೆ?**

ತುಂಬ ಖುಷಿ ಕೊಡ್ತಿದೆ. ಅದು ಮುಗೀತಾ ಬಂತು. ಇನ್ನೊಂದು ಐದು ಎಪಿಸೋಡ್ ಇದೆ. ಜುಲೈ 15ರಂದು ಈ ಸೀಸನ್ ಮುಗಿಯುತ್ತದೆ. ಅದು ಮುಗಿದ ಕೂಡಲೇ '100' ಕೆಲಸ ಶುರುವಾಗುತ್ತದೆ. ಇದು ನನ್ನ ಬದುಕಿನ ಅಪರೂಪದ ಸಂದರ್ಭ. ಒಂದು ಸಿನಿಮಾ ಬರೀ ನಟನಾಗಿ (ಶಿವಾಜಿ ಸುರತ್ಕಲ್), ಇನ್ನೊಂದರಲ್ಲಿ ಬರೀ ನಿರ್ದೇಶಕನಾಗಿ (ಬಟರ್‌ಫ್ಲೈ), ಇನ್ನೊಂದರಲ್ಲಿ ನಿರ್ದೇಶಕ ಮತ್ತು ನಟನಾಗಿ (100), ಒಂದು ಕಾರ್ಯಕ್ರಮಕ್ಕೆ ನಿರೂಪಕನಾಗಿ (ವೀಕೆಂಡ್ ವಿತ್ ರಮೇಶ್), ಇನ್ನೊಂದು ಟೀವಿ ಸೀರಿಯಲ್ (ನಂದಿನಿ) ನಿರ್ಮಾಪಕನಾಗಿ ಹೀಗೆ ಹಲವು ಪಾತ್ರಗಳನ್ನು ಏಕಕಾಲಕ್ಕೆ ನಿರ್ವಹಿಸಲು ನನಗೆ ಅವಕಾಶ ಸಿಕ್ಕಿದೆ. ಅವೆಲ್ಲವೂ ಬೇರೆ ಬೇರೆ ರೀತಿಯಲ್ಲಿ ನನಗೆ ಖುಷಿಕೊಡುತ್ತಿವೆ.

◆ **'ಕನ್ನಡದ ಕೋಟ್ಯಧಿಪತಿ'ಯ ಕಳೆದ ಸೀಸನ್ ನೀವು ನಡೆಸಿಕೊಟ್ಟಿದ್ದೀರಿ. ಈ ಸಲ ಪುನೀತ್ ನಡೆಸಿಕೊಡುತ್ತಿದ್ದಾರೆ. ಏನನಿಸುತ್ತಿದೆ?**

ನಾನು ಅಪ್ಪು ತುಂಬ ಒಳ್ಳೆಯ ಸ್ನೇಹಿತರು. ನಾನು ಉದಯ ಟೀವಿಯಲ್ಲಿದ್ದಾಗ ಈ ಕಾರ್ಯಕ್ರಮ ಮಾಡಬೇಕಾಗಿತ್ತು. ಆದರೆ ಸುವರ್ಣದಲ್ಲಿ ಅಪ್ಪು ನಡೆಸಿಕೊಟ್ಟರು. ನಂತರ ಅಪ್ಪು ಕಲರ್ಸ್‌ಗೆ ಬಂದರು. ನಾನು ಸುವರ್ಣಗೆ ಹೋದೆ. ಆಗ ಕೋಟ್ಯಧಿಪತಿ ನಾನು ನಡೆಸಿಕೊಟ್ಟೆ. ಈಗ ಕೋಟ್ಯಧಿಪತಿ ಕಲರ್ಸ್‌ಗೆ ಹೋಗಿದೆ. ಮತ್ತೆ ಅಪ್ಪು ನಡೆಸಿಕೊಡ್ತಿದ್ದಾರೆ. ಅವರು ನಡೆಸಿಕೊಡುವ ಸ್ಟೈಲ್ ಬೇರೆ. ನಾನು ನಡೆಸಿಕೊಡುವ ಸ್ಟೈಲ್ ಬೇರೆ. ಇಬ್ಬರಿಗೂ ಆ ಗೇಮ್ ಶೋ ಬಹಳ ಇಷ್ಟ. ಅಷ್ಟೇ ಅಲ್ಲ, ನನಗೆ ಅವರು ನಡೆಸಿಕೊಡುವ ರೀತಿ ಮತ್ತು ಅವರಿಗೆ ನಾನು ನಡೆಸಿಕೊಡುವ ರೀತಿಯೂ ಅಷ್ಟೇ ಇಷ್ಟ. ಹಾಗಾಗಿ ಈ ಸೀಸನ್ ಅನ್ನು ತುಂಬ ಖುಷಿಯಿಂದಲೇ ನೋಡುತ್ತೇನೆ. ■

# ಸುಮ್ಮನಾದನೆ ನಾಥೂರಾಮ?





'ನಾಥೂರಾಮ ಒಂದು ವಿಶಿಷ್ಟ ಚಿತ್ರ. ಇದರಿಂದ ರಿಷಭ್ ಶೆಟ್ಟಿ ಅವರಿಗೆ ಖಂಡಿತ ಹೊಸದೊಂದು ಇಮೇಜ್ ಸಿಗುತ್ತದೆ' ಎಂದು ಮುಹೂರ್ತದ ದಿನ ನಿರ್ದೇಶಕ ವಿನು ಬಳಂಜ ತುಂಬು ವಿಶ್ವಾಸದಲ್ಲಿ ನುಡಿದಿದ್ದರು. ಆಗಷ್ಟೇ 'ಬೆಲ್ ಬಾಟಂ' ಸಿನಿಮಾ ಹಾಡು, ಟ್ರೇಲರ್ ಎಬ್ಬಿಸಿದ್ದ ಕ್ರೇಜಿನ ಅಲೆಯಲ್ಲಿ ತೇಲುತ್ತಿದ್ದ ರಿಷಭ್ ಅವರೂ ಆ ಉಬ್ಬರವನ್ನು 'ನಾಥೂರಾಮ' ಸಿನಿಮಾ ಇಮ್ಮಡಿಸುತ್ತದೆ ಎಂಬ ವಿಶ್ವಾಸದಲ್ಲಿದ್ದರು.

ಆದರೆ ಕೆಲವು ದಿನಗಳು ಚಟುವಟಿಕೆಯಿಂದಿದ್ದ 'ನಾಥೂರಾಮ' ಈಗ ಸುಮ್ಮನಾಗಿದ್ದಾನೆ. ಕಳೆದ ಡಿಸೆಂಬರ್‌ನಲ್ಲಿಯೇ ಈ ಚಿತ್ರ ಮುಹೂರ್ತವಾಗಿ ಕೆಲದಿನಗಳ ಚಿತ್ರೀಕರಣವೂ ನಡೆದಿತ್ತು. ನಂತರ ಚಿತ್ರತಂಡ ಸ್ತಬ್ಧವಾಗಿದೆ ಎಂಬುದು ಗಾಂಧಿನಗರದಲ್ಲಿ ಹಬ್ಬಿರುವ ಗಾಳಿಮಾತು.

ಶೂಟಿಂಗ್ ನಡುವೆ ಬ್ರೇಕ್ ತೆಗೆದುಕೊಳ್ಳುವುದು ಚಿತ್ರರಂಗದಲ್ಲಿ ಮಾಮೂಲು. ಆದರೆ 'ನಾಥೂರಾಮ'ನ ಕಥೆ ಬೇರೆಯೇ ಇದೆ ಎನ್ನುತ್ತವೆ ಗಾಂಧಿನಗರ ಮೂಲಗಳು. ಆ ಮೂಲಗಳ ಪ್ರಕಾರ ಈ ಚಿತ್ರ ನಿಂತುಹೋಗಿದೆ. ರಿಷಭ್ ಬೇರೆ ಸಿನಿಮಾ ಚಿತ್ರೀಕರಣದಲ್ಲಿ ತೊಡಗಿಕೊಂಡಿಲ್ಲ. ವಿನು ಬಳಂಜ ಕೂಡ ಬೇರೆ ಸಿನಿಮಾ ಮಾಡುತ್ತಿಲ್ಲ. ನಿರ್ಮಾಪಕರ ಸಮಸ್ಯೆ ಇದ್ದಂತಿಲ್ಲ. ಹಾಗಿದ್ದರೆ ಚಿತ್ರ ನಿಲ್ಲಲು ಏನು ಕಾರಣ? ಈ ಪ್ರಶ್ನೆಗೆ ಅಧಿಕೃತ ಉತ್ತರ ಇಲ್ಲದಿದ್ದರೂ ರಿಷಭ್ ಅವರೇ ಚಿತ್ರದಿಂದ ಹಿಂದೆ ಸರಿದಿದ್ದಾರೆ ಎಂಬ ಮಾಹಿತಿ ಇದೆ.

ಒನ್ ಲೈನ್ ಕಥೆ ಕೇಳಿ ಥ್ರಿಲ್ ಆಗಿದ್ದ ರಿಷಭ್‌ಗೆ ಸೆಟ್‌ನಲ್ಲಿ ನಿರ್ದೇಶಕರು ಬೇರೆಯೇ ಕಥೆ ಹೇಳತೊಡಗಿದಾಗ ಭಿನ್ನಾಭಿಪ್ರಾಯ ಬಂದಿದೆ. ಇದೇ ಕಾರಣಕ್ಕೆ ರಿಷಭ್ ಚಿತ್ರದಿಂದ ಹಿಂದೆ ಸರಿದಿದ್ದಾರೆ ಎಂಬುದು ಸುದ್ದಿ. ರಿಷಭ್ ತಮ್ಮ ಹೊಸ ಸಿನಿಮಾ 'ಅಂಟಗೊನಿ ಶೆಟ್ಟಿ'ಯನ್ನು ಘೋಷಣೆ ಮಾಡಿರುವುದೂ 'ನಾಥೂರಾಮ' ನಿಂತಿರುವುದಕ್ಕೆ ಪುಷ್ಟಿ ನೀಡುವ ಹಾಗೆಯೇ ಇದೆ.

'ನಾಥೂರಾಮ' ನಿಂತಿರುವದು ಸತ್ಯವೋ ಸುಳ್ಳೋ ಚಿತ್ರತಂಡದವರೇ ಹೇಳಬೇಕು. ಎಲ್ಲವೂ ಸುರಳೀತವಾಗಿ ನಡೆಯುತ್ತಿಲ್ಲ ಎಂಬುದಂತೂ ಮೇಲ್ನೋಟಕ್ಕೆ ಊಹಿಸುವ ಹಾಗೆಯೇ ಇದೆ. ■

# ಅಂಜು ಕನಸು ಅಂಜನಾಗೂ ಉಂಟು!



ರಂಗಭೂಮಿಯಿಂದ ಸಿನಿಮಾ ತೆರೆಗೆ ಅಡಿಯಿಡುತ್ತಿರುವ ಹುಡುಗಿ ಅಂಜನಾ ಶೆಟ್ಟಿ. ಅವರ ಮೊದಲ ಸಿನಿಮಾಗೂ ನಿಜಜೀವನಕ್ಕೂ ಹಲವು ಸಾಮ್ಯತೆಗಳಿವೆ. ಇತ್ತೀಚೆಗೆ ಮುಹೂರ್ತ ಕಂಡ ಅವರ ಮೊದಲ ಸಿನಿಮಾ ಹೆಸರು 'ಅಂಜು'. ಚಿತ್ರದಲ್ಲಿಯೂ ಅವರ ಹೆಸರು ಅಂಜನಾ. ನಟನಾ ಬದುಕಿನಲ್ಲಿ ಕಷ್ಟದ ದಿನಗಳನ್ನು ದಾಟಿ ಬೆಳ್ಳಿ ತೆರೆಯ ಮೇಲೆ ಮಿಂಚುವ ಕನಸು ಕಾಣುತ್ತಿದ್ದಾರೆ ಅಂಜನಾ ಶೆಟ್ಟಿ. ಅವರು ನಟಿಸುತ್ತಿರುವ ಚಿತ್ರದ ನಾಯಕಿಯದ್ದೂ ಇಂಥದ್ದೇ ಕನಸು! ಹಳ್ಳಿಯ ಹಿನ್ನೆಲೆಯಿಂದ ಬಂದಿರುವ ಬಾಲಕಿ ಪ್ರತಿಭೆ–ಪರಿಶ್ರಮದಿಂದ ಕಷ್ಟದ ದಿನಗಳನ್ನು ದಾಟಿ ವಿಶ್ವಸುಂದರಿಯಾಗಿ ಮೆರೆಯುವುದು ಈ ಸಿನಿಮಾದ ಕಥೆ. ಸಿನಿಮಾದಲ್ಲಿ ತಾನು ನಟಿಸುತ್ತಿರುವ ಪಾತ್ರಕ್ಕೆ ಸಿಕ್ಕ ಯಶಸ್ಸು ತನಗೂ ಸಿಗಲಿ ಎಂದು ಅಂಜನಾ ಮನಸಾರೆ ಪ್ರಾರ್ಥಿಸಿಕೊಳ್ಳುತ್ತಿರಬೇಕು!

ಎ. ವಿಶ್ವನಾಥ್ ನಿರ್ದೇಶನ ಮಾಡುತ್ತಿರುವ ಈ ಚಿತ್ರದಲ್ಲಿ ರಕ್ಷಿತ್ ನಾಯಕನಾಗಿ ನಟಿಸುತ್ತಿದ್ದಾರೆ. ರಾಜ್‌ಕಿಶೋರ್ ಸಂಗೀತ, ಮನು ಛಾಯಾಗ್ರಹಣ ಈ ಚಿತ್ರಕ್ಕಿದೆ. ಚಿತ್ರದ ಹಲವು ಪಾತ್ರಕ್ಕೆ ಇನ್ನಷ್ಟೇ ನಟರ ಆಯ್ಕೆ ನಡೆಯಬೇಕಿದೆ. ■